ಪಾಠ 12: ಸಮುದಾಯ

ಮೂಲ: ಬ್ರೂಸ್ ಎನ್ ಕ್ಯಾಮರಾನ್: ಅನುವಾದ: ಪಾಸ್ಟರ್ ಜೆಲುವರಾಜು

ಪೀಠಿಕೆ:

ನನ್ನ ಚಿಕ್ಕಪ್ಪ ದೇವರ ಮನುಷ್ಯ, ಇಪ್ಪತ್ತನೇ ಶತಮಾನದ ಆದಿಭಾಗದಲ್ಲಿ ಹುಟ್ಟಿದವರು. ಜೀವನವಿಡೀ, ಸಾಲವೇಷನ್ ಆರ್ಮಿ ಚರ್ಚ್‌ನಲ್ಲಿ ಬೋಧಕರಾಗಿಯೂ ಮತ್ತು ಆಡಳಿತಗಾರರಾಗಿಯೂ ಇದ್ದವರು. ಅವರ ಜೀವಮಾನ ಕಾಲದಲ್ಲಿ ಕ್ರೈಸ್ತೀಯ ಸಮುದಾಯದಲ್ಲಿ ಆದ ಬದಲಾವಣೆಗಳೇನು ಎಂದು ಒಂದು ದಿನ ಅವರಲ್ಲಿ ನಾನು ಕೇಳಿದೆ. ಕ್ರೈಸ್ತೀಯ ಸಮುದಾಯಕ್ಕೆ ಚರ್ಚು (ಆಲಯ) ಕೇಂದ್ರವಾಗಿತ್ತು, ಆದರೆ ಈಗ ದೂರದರ್ಶನ (ಟೆಲಿವಿಷನ್) ಅದರ ಸ್ಥಳವನ್ನಾಕ್ರಮಿಸಿದೆ ಎಂದು ಹೇಳಿದರು. ದೂರದರ್ಶನದ ಅನ್ವೇಷಣೆಯ ಮುನ್ನ ಚರ್ಚು ಸಾಮಾಜಿಕ ಸಮಾರಂಭಗಳ ಕೇಂದ್ರವಾಗಿತ್ತು. ಆದರೆ ಈಗ ಆಗಲ್ಲ. ಆನ ಮನೆಯಲ್ಲೇ ಉಳಿಯುತ್ತಾರೆ. ಸಾಮಾಜಿಕ ನಂಟನ್ನು ದೂರದರ್ಶನದೊಂದಿಗೆ ಪಡೆಯುತ್ತಿದ್ದಾರೆ. ನನ್ನ ಚಿಕ್ಕಪ್ಪ ಈಗ ಬದುಕಿಲ್ಲ. ಅವರೇನಾದರೂ ಬದುಕಿದ್ದರೆ, ಇಂಟರ್‌ನೆಟ್ ಮತ್ತು ಮೊಬೈಲ್ ಫೋನ್‌ಗಳು ಮುಂದಿನ ಜನಾಂಗದ ಸಮುದಾಯವಾಗುತ್ತದೆ. ಎಂದು ಹೇಳುತ್ತಿದ್ದರೇನೋ? ಜನಸಮುದಾಯಕ್ಕೆ ದೇವರ ಯೋಜನೆ ಏನು? ಆತನನ್ನು ಹಿಂಬಾಲಿಸುವವರಿಗೆ, ಆತನ ಗುರಿಯೇನು? ತಾಂತ್ರಿಕ ಯಂತ್ರೋಪಕರಣಗಳು ಈ ನಿಟ್ಟಿನಲ್ಲಿ ಸಹಾಯಕಾರಿ ಎನಿಸಿವೆಯೇ? ಅಥವಾ ಅಡ್ಡಿಯೋಪಾದಿಯಲ್ಲಿವೆಯೇ? ಆಲಯ ಹಿಂದಿನ ಸ್ಥಿತಿಗೆ ಹಿಂತಿರುಗಬಹುದೇ? ಸಮುದಾಯವನ್ನು ಕುರಿತು ಸತ್ಯವೇದ ಏನು ಹೇಳುತ್ತದೆಯೆಂದು ಈಗ ನಾವು ಕಲಿಯೋಣವೇ?

ಅ) 1 ಪೇತ್ರ 2:4–5 ನ್ನು ಓದಿಕೊಳ್ಳಿ. "ಜೀವವುಳ್ಳ ಕಲ್ಲು" ಯಾರು? (ಪೇತ್ರನು ಇಲ್ಲಿ ಯೇಸುಸ್ವಾಮಿಯನ್ನು ಕುರಿತು ಮಾತಾಡುತ್ತಿದ್ದಾನೆ).

1) ಇಲ್ಲಿ ಪೇತ್ರ ಒಂದು ರೀತಿಯಲ್ಲಿ ಸಮುದಾಯವನ್ನು ಕುರಿತು ಮಾತನಾಡುವಂತಿದೆಯಲ್ಲವೇ?

   i) ಸಮುದಾಯ ಕಟ್ಟಲ್ಪಡುವ ಮೂಲಭೂತ ವಸ್ತು ಯಾವುದು?

   (ನಾವೇ! ಏಕೆಂದರೆ ನಾವು ತಾನೇ "ಜೀವವುಳ್ಳ ಕಲ್ಲುಗಳು")

   ii) ನಮ್ಮ ಸಮುದಾಯದ ಗುರಿಯೇನು? (ನಾವೆಲ್ಲ ಯಾಜಕರು, ಯಾಜಕರಾದ ನಾವು ಜನರಿಗೆ ದೇವರನ್ನು ಪ್ರತಿನಿಧಿಸುತ್ತಿದ್ದೇವೆ).

ನಾವು ''ಆತ್ಮೀಯ ಯಜ್ಞಗಳನ್ನು'' ಸಮರ್ಪಿಸುತ್ತಿದ್ದೇವೆ ಎಂದು ಮೇಲಿನ ವಚನ ಹೇಳಿದೆ. ನಾವು ಯಾವುದೋ ಯಾಜಕವರ್ಗದವರಾಗಿದ್ದುಕೊಂಡು, ಏನೋ ಒಂದು ಯಜ್ಞ ಸಮರ್ಪಿಸುತ್ತಿದ್ದೇವೆ ಎಂದು ಈ ವಚನ ಹೇಳುತ್ತಿದೆಯಲ್ಲ, ಇದರ ಅರ್ಥವಾದರೂ ಏನು?

(ನಮ್ಮ ಪಾಪಗಳ ಸಲುವಾಗಿ ಯೇಸುಸ್ವಾಮಿ ತಮ್ಮನ್ನೇ ಯಜ್ಞದ ಕುರಿಯಾಗಿಸಿಕೊಂಡು, ತಮ್ಮ ರಕ್ತವನ್ನು ಸುರಿಸಿದರು. ಆ ಯೇಸುಸ್ವಾಮಿಯನ್ನೇ ನಾವು ನಮ್ಮ ರಕ್ಷಕನನ್ನಾಗಿ ಆರಿಸಿಕೊಂಡಿದ್ದೇವೆ. ಆ ಯೇಸುಸ್ವಾಮಿಯ ನಾಮದಲ್ಲಿ ಅಲ್ಲದೇ, ಬೇರಾವ ನಾಮದಲ್ಲಿಯೂ ರಕ್ಷಣೆಯಿಲ್ಲ. ಈ ಸತ್ಯವನ್ನು ನಾವು ಈ ಲೋಕದಲ್ಲಿರುವ ಎಲ್ಲಾ ಜನಕ್ಕೆ ಸಾರುತ್ತಿದ್ದೇವೆ).

ಆ) 1 ಪೇತ್ರ 2:6 ನ್ನು ಓದಿಕೊಳ್ಳಿ. ''ಜೀವಂತ ಕಲ್ಲಿಗೂ'' ಮತ್ತು ''ಜೀವಂತ ಕಲ್ಲುಗಳಿಗೂ'' ಇರುವ ಸಂಬಂಧವೇನು? (ಜೀವಂತ ಕಲ್ಲು''ಗಳಾದ ನಮ್ಮಿಂದ ನಿರ್ಮಿತವಾದ ಕಟ್ಟಡದ ಮೂಲೆಗಲ್ಲು ಎಂಬ ''ಜೀವಂತ ಕಲ್ಲು'' ಯೇಸುಸ್ವಾಮಿ ಅವರು ನಮ್ಮ ಜೀವನದಲ್ಲಿ ಬೆರೆತುಹೋಗಿದ್ದಾರೆ. ನಮ್ಮ ಜೀವನದ ಅಧಿಪತಿಯಾಗಿದ್ದಾರೆ. ನಾವು ಅವರ ದಾರಿ ಇಡಿದು ನಡೆದರೆ, ಎಂದಿಗೂ ನಮಗೆ ಅಪಮಾನವಾಗದು.

1) ಯೋಹಾನ 14:6 ನ್ನು ಓದಿಕೊಳ್ಳಿರಿ. ಸಮುದಾಯದಲ್ಲಿ ಯೇಸುಸ್ವಾಮಿ ವಹಿಸುವ ಇನ್ನೊಂದು ಪಾತ್ರ ಯಾವುದು? (ಯೇಸುಸ್ವಾಮಿ ನಮ್ಮ ಸಮುದಾಯದ ''ಮೂಲೆಗಲ್ಲು'' ಮಾತ್ರವಲ್ಲ, ಅವರು ನಮ್ಮ ಸಮುದಾಯದ ''ಬಾಗಿಲು'' ಆಗಿದ್ದಾರೆ. ನಮ್ಮ ಸಮುದಾಯ, ''ಯೇಸು'' ಕೇಂದ್ರಿತ ಸಮುದಾಯವಾಗಿದೆ).

ಇ) ತಾಂತ್ರಿಕೋಪಕರಣಗಳು ಯಾವ ರೀತಿಯಲ್ಲಾದರೂ ಈ ಸಮುದಾಯಕ್ಕೆ ಸಮಸ್ಯೆಗಳನ್ನೊಡ್ಡಿವೆಯೇ? (ಇಲ್ಲ, ಒಡ್ಡಬೇಕಾಗಿಲ್ಲ. ಸಂವಹನಕ್ಕೆ (ಮಾತಿನ ಸಂಪರ್ಕಕ್ಕೆ) ಯಂತ್ರೋಪಕರಣಗಳು ಬಹಳ ಸಹಾಯಕಾರಿಯಾಗಿವೆ. ''ಜೀವಂತ ಕಲ್ಲು''ಗಳಾದ ನಾವು ಯೇಸುಸ್ವಾಮಿಯವರನ್ನು ಆಧಾರಮಾಡಿಕೊಂಡು ಕಟ್ಟಡದಲ್ಲಿ ಒಂದುಗೂಡಿದರೆ, ಉತ್ತಮ ಸಂವಹನ, ಉತ್ತಮವಾದ ಕಟ್ಟಡವನ್ನು ರಚಿಸಿಕೊಡುತ್ತದೆ).

1) ಯಂತ್ರೋಪಕರಣಗಳು ನಿಜಕ್ಕೂ ಸಮಸ್ಯೆ ಎನಿಸಿದೆಯೇ? (ಹೌದು, ''ಜೀವಂತ ಕಲ್ಲಾದ'' ಮೂಲೆಗಲ್ಲನ್ನು ಬಿಟ್ಟು, ಬೇರ್ಯಾವುದಾದರೂ ಕಲ್ಲಿನ ಮೇಲೆ ಕಟ್ಟಡ ಕಟ್ಟಲು ಹೋದರೆ ಸಮಸ್ಯೆ ನಿಶ್ಚಿತ. ಇದು ನಮಗೆ ಸಮುದಾಯದಲ್ಲಿ ಒಂದು

ಮಟ್ಟದ ಪ್ರೈವಸಿಕೊಡುವುದರಿಂದ, ಅದು ನಮ್ಮ ಜವಾಬ್ದಾರಿಕೆಯನ್ನು ಮಿತಿಗೊಳಪಡಿಸುತ್ತದೆ).

2) ಅನೇಕ ಇಂಟರ್‌ನೆಟ್ ಬ್ರೌಸರ್‌ಗಳು "ಇತಿಹಾಸದ" ಒಂದು ಭಾಗವನ್ನು ಹೊಂದಿರುತ್ತವೆ. ನಿಮ್ಮ ವೈಯಕ್ತಿಕ ಜೀವನದ ಇತಿಹಾಸವನ್ನು ಅದು ನಡೆಯುತ್ತಿರುವಾಗಲೇ, ಜನಸಮುದಾಯಕ್ಕೆ ಇಂಟರ್‌ನೆಟ್‌ನ ಇತಿಹಾಸ ವಿಭಾಗದಲ್ಲಿ ಬಿತ್ತರಗೊಳಿಸಬಹುದೇ? ಎಂದು ನಿಮ್ಮನ್ನೇ ಪ್ರಶ್ನಿಸಿಕೊಳ್ಳಿ.

ಈ) 1 ಪೇತ್ರ 2:7–8 ನ್ನು ಓದಿಕೊಳ್ಳಿರಿ. "ಜೀವಂತ ಕಲ್ಲು" ಸಮಸ್ಯೆಯಾಗಬಹುದೇ? ("ಜೀವಂತ ಕಲ್ಲಾದ" ಯೇಸುಸ್ವಾಮಿಗೆ ವಿಧೇಯರಾಗದವರಿಗೆ, ಈ ಕಲ್ಲಿನಿಂದ ಯಾವ ಪ್ರಯೋಜನವೂ ಆಗದು. ವಿಧೇಯರಾಗದವರು ಅದಕ್ಕೆ ಎಡವಿಕೊಂಡು ಮುಗ್ಗರಿಸುತ್ತಾರೆ).

1) ಏಕೆ? (ರೋಮ 9:30–33 ರಲ್ಲಿ ಇದನ್ನು ಕುರಿತ ಚರ್ಚೆಯನ್ನು ಕಾಣಬಹುದು. ನೇಮನಿಷ್ಠೆಗಳನ್ನು ಆಧಾರ ಮಾಡಿಕೊಂಡು ನೀತಿಯ ಹರಸುವವರು, ಯೇಸುಸ್ವಾಮಿಯಲ್ಲಿ ನಂಬಿಕೆಯಿಟ್ಟು ಪಡೆದುಕೊಳ್ಳಬಹುದಾದ ನೀತಿಯನ್ನು ಅಂಗೀಕಾರ ಮಾಡಿಕೊಳ್ಳಲಿಲ್ಲ. ನಾವಾದರೋ ಅಂಥಹ ನಂಬಿಕೆಯ ಮೇಲೆ ನಿರ್ಮಾಣವಾದ ಸಮುದಾಯವಾಗಿದ್ದೇವೆ).

ಉ) 1 ಪೇತ್ರ 2:9 ನ್ನು ಓದಿಕೊಳ್ಳಿರಿ. ಯೇಸುಸ್ವಾಮಿಯವರನ್ನು ಆಧಾರಮಾಡಿಕೊಂಡು ಕಟ್ಟಲ್ಪಟ್ಟ ಸಮುದಾಯವಾದ ನಮ್ಮ ಉದ್ದೇಶವೇನು?

1) ನಮ್ಮನ್ನು "ಆದುಕೊಂಡ ಜನಾಂಗ" ಎಂದು ಕರೆದಿರುವುದೇಕೆ? ಇದು ಯಿಹೊದಿಗಳನ್ನು ಕುರಿತ ವರ್ಣನೆಯಲ್ಲವೇ? (ಅವರು ತಾನೇ ದೇವರನ್ನು ಇಡೀ ಲೋಕಕ್ಕೆ ಪ್ರತಿನಿಧಿಸಬೇಕಿತ್ತು. ಆದರೆ ದೇವರು ಅವರಿಗೆ ಕೊಟ್ಟಿದ್ದ ಗುರಿಯನ್ನು ಮುಟ್ಟಲು ಅವರು ವಿಫಲರಾದರು. ಇಂದು, ಸಭೆ ದೇವರನ್ನು ಇಡೀ ಲೋಕಕ್ಕೆ ಪ್ರತಿನಿಧಿಸುತ್ತಿದೆ).

ಊ) 1 ಪೇತ್ರ 2:11 ನ್ನು ಓದಿಕೊಳ್ಳಿ. ಯೇಸುಸ್ವಾಮಿಯ ಭಕ್ತರಾದ ನಮ್ಮಲ್ಲಿ ಎಂಥಹ ಮನೋಭಾವಗಳಿರಬೇಕು? (ನಾವು ಪಾಪಮಯ ಬಯಕೆಗಳಿಂದ ದೂರವಿರೋಣ. ನಾವು ನಮ್ಮನ್ನು ಈ ಲೋಕದಲ್ಲಿ "ಪ್ರವಾಸಿಗಳೂ ಪರದೇಶಸ್ಥರೂ" ಎಂದುಕೊಳ್ಳೋಣ).

1) ಏಕೆ? (ಪಾಪಮಯವಾದ ಬಯಕೆಗಳು ನಮ್ಮ ಆತ್ಮದ ವಿರುದ್ಧ ಸೆಣಸುತ್ತಿವೆ).

2) ಇಂಟರ್‌ನೆಟ್ಟಿನಲ್ಲಿ ತೋರಿಸಬಹುದಾದ ನಿಮ್ಮ ಇತಿಹಾಸವನ್ನು ಕುರಿತು ಚಿಂತನೆಮಾಡಿರಿ. ಕಳೆದಬಾರಿ ನೀವು ಹರಡಿದ ಗಾಳಿಸುದ್ದಿಯನ್ನು ಕುರಿತು ಆಲೋಚಿಸಿನೋಡಿ. ನಿಮ್ಮ ಶಾರೀರಿಕ ಅಭಿಲಾಷೆಗಳನ್ನು ನೀವು ಅದ್ದೇಗೆ ನಿಯಂತ್ರಿಸಿಕೊಳ್ಳುವಿರಿ?

ಎ) ಒಂದು ಸಮುದಾಯ ಸತ್‌ಶೀಲ ಜೀವನ ನಡೆಸುವದು ಎಷ್ಟು ಮುಖ್ಯ? ನಮಗೆ ಗೊತ್ತು, ಸತ್‌ಶೀಲ ಜೀವನ ನಡೆಸಬೇಕು ಎಂದು ಹೇಳಿದೊಡನೆ "ಹಳಿಬಿಟ್ಟ ರೈಲಿನ ಬೋಗಿ"ಗಳ ಹಾಗೆ ಕ್ರೈಸ್ತರು ಮಗುಚಿಕೊಳ್ಳುತ್ತಾರೆ. ಅಂಥಹ ಸಮುದಾಯ ಅವರನ್ನು ರಕ್ಷಿಸಲಿಲ್ಲ. (ಕ್ರೈಸ್ತ ಸಮುದಾಯಕ್ಕೆ ಸೇರಿದ ಮಾತ್ರಕ್ಕೆ ಅದು ರಕ್ಷಣೆಯನ್ನು ಖಚಿತಪಡಿಸುವುದಿಲ್ಲ. ಆದರೆ ಸತ್‌ಶೀಲ ಜೀವನ ನಡೆಸಿದಾಗ ಅದರಿಂದ ಖಂಡಿತ ರಕ್ಷಣೆಗೆ ಸಹಾಯವುಂಟು).

1. ಸಮುದಾಯದ ಪ್ರಭಾವ ಎಂಥಹುದು ಎಂಬುದನ್ನು ನಾನು ಮಗುವಾಗಿದ್ದಾಗಿನಿಂದ ನೋಡಿದ್ದೇನೆ. ನಮ್ಮ ಅಪ್ಪ ಸಮುದಾಯದಲ್ಲಿ ಒಳ್ಳೆ ಗೌರವಾನ್ವಿತ ವ್ಯಕ್ತಿಯಾಗಿದ್ದರು, ಆದರೆ ಅವರೂ ಕೂಡ ಸಮುದಾಯದ ಒಂದು ಭಾಗವಾಗಿದ್ದ ಜಾನಸನ್ಸ್ ನ್ಯೂ ಸ್ಟಾಂಡ್ ಎಂಬ ಪತ್ರಿಕೆಯ ಅಂಗಡಿಯಿಂದ ಮ್ಯಾಗ್‌ಝಿನ್‌ಗಳನ್ನು ಪ್ರತಿ ರಾತ್ರಿ ಖರೀದಿಸುತ್ತಿದ್ದರು. ಈ ಪತ್ರಿಕೆಯ ಅಂಗಡಿ ಮಾತ್ರ ಬೆತ್ತಲೆ ಹೆಣ್ಣುಗಳ ಚಿತ್ರಗಳನ್ನು ಮಾರುತ್ತಿತ್ತು. ಸಮುದಾಯದ ಎದುರಿನಲ್ಲಿ ನಮ್ಮಪ್ಪ ಆ ಬೆತ್ತಲೆ ಚಿತ್ರಗಳನ್ನು ಖರೀದಿಸುವದು ಎಂದರೆ, ಆತನೇ ಸಮುದಾಯದೆದುರು ತನ್ನ ಬಟ್ಟೆಬಿಚ್ಚಿ ಆ ಅಂಗಡಿಯ ಹತ್ತಿರ ಬೆತ್ತಲೆ ನಿಂತಿದ್ದಕ್ಕೆ ಸಮ ಎಂದು ನನಗನ್ನಿಸುತ್ತಿತ್ತು.

ಏ) 1 ಪೇತ್ರ 2:12 ನ್ನು ಓದಿಕೊಳ್ಳಿರಿ. ಸಮುದಾಯ ತನ್ನ ಸದಸ್ಯರಿಗೆ ಸಹಾಯಮಾಡುವದು ಮಾತ್ರವಲ್ಲ, ಅನ್ಯಜನರ ಮಧ್ಯದಲ್ಲಿ ಅದು ಸಾಕ್ಷಿ ನೀಡುವಂತಿರಬೇಕು. ಕ್ರೈಸ್ತ ಸಮುದಾಯದ ಬಗ್ಗೆ ಅನ್ಯ ಜನರು ಮೆಚ್ಚಿಗೆ ಸೂಚಿಸುವರೇ? (ಇಲ್ಲ ನಾವು ತಪ್ಪು ಮಾಡುತ್ತಿದ್ದೇವೆ ಎಂದೇ ಆರೋಪ ಮಾಡುತ್ತಿರುತ್ತಾರೆ).

II. ಅ) ಯಾಕೋಬ 1:27 ನ್ನು ಓದಿಕೊಳ್ಳಿರಿ. ಯಾಕೋಬ ಒಬ್ಬ ಬರಹಗಾರನಾಗಿ, ಕ್ರೈಸ್ತನಾದವನೊಬ್ಬನ ಕೆಲಸ ಏನು ಎಂಬುದನ್ನು ಒತ್ತಿಹೇಳಿದ್ದಾನೆ. (ಕೆಲವೊಮ್ಮೆ, ಪೌಲ ಮತ್ತು ಯಾಕೋಬ ಇಬ್ಬರು ಜೊತೆಗೂಡಿ ಒಂದೇ ಪುಸ್ತಕವನ್ನು ಬರೆದಿದ್ದರೆ

ಎಷ್ಟು ಚನ್ನಾಗಿತ್ತು ಎಂದು ನನಗನ್ನಿಸುತ್ತದೆ) ಕ್ರೈಸ್ತ ಸಮುದಾಯದ ಸದಸ್ಯರಾದ ನಮ್ಮ ಮೊದಲ ಕರ್ತವ್ಯ ಏನಾಗಿರಬೇಕೆಂದು ಯಾಕೋಬ ಹೇಳುತ್ತಾನೆ? (ದಿಕ್ಕಿಲ್ಲದವರನ್ನು ವಿಧವೆಯರನ್ನೂ ಪರಾಮರಿಸಿರಿ).

ಆ) 1 ತಿಮೋಥಿ 5:3–4 ಓದಿಕೊಳ್ಳಿ. ಕ್ರೈಸ್ತ ಸಮುದಾಯವೆಂಬ ಬೃಹತ್ ರಚನೆಯಲ್ಲಿ ನಾವು ಹೊಂದಿರುವ ಸಣ್ಣ ಸಮುದಾಯ ಯಾವುದು? (ಕುಟುಂಬ– ಮತ್ತು ವಿಸ್ತರಿಸಲ್ಪಟ್ಟ ಕುಟುಂಬ).

1) 1 ತಿಮೊಥಿ 5:7–8 ನ್ನು ಓದಿಕೊಳ್ಳಿ. ಒಬ್ಬ ತನ್ನ ಸ್ವಂತ ಮನೆಯವರನ್ನು ರಕ್ಷಣೆಯ ಮಾರ್ಗಕ್ಕೆ ಕರೆದುಕೊಂಡು ಬಾರದೇ ಹೋದರೆ, ಆತ ಅನ್ಯಜನರಿಗಿಂತಲೂ ಕಡೆಯಾದವನಾಗುವುದು ಏಕೆ? (ನಿಮಗೆ ಪ್ರೀತಿಪಾತ್ರರಾಗಿರುವವರನ್ನೇ ನೀವು ಪ್ರೀತಿಸದೆ, ರಕ್ಷಣೆಯ ಮಾರ್ಗಕ್ಕೆ ಸಹಾಯಮಾಡದೆ ಹೋದರೆ, ಅಪರಿಚಿತರಾದವರಿಗೆ ನೀವು ಹೇಗೆ ಸಹಾಯಮಾಡಬಲ್ಲಿರಿ?

ಇ) 1 ತಿಮೋಥಿ 5:9–10 ನ್ನು ಓದಿಕೊಳ್ಳಿರಿ. ''ವಿದವೆಯರ ಪಟ್ಟಿ''ಯ ವಿಷಯದಲ್ಲಿ ಗ್ರಂಥವಿಮರ್ಶಕರ ಅಭಿಪ್ರಾಯಗಳು ಭಿನ್ನವಾಗಿವೆ. ಕೆಲವರು ಈ ವಿಧವೆಯರು ಆಲಯದ ಊಳಿಗದವರಾಗಿರಬಹುದು ಎನ್ನುತ್ತಾರೆ. ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳಲು ಅ.ಕೃ. 6:1 ಮತ್ತು 1 ತಿಮೋಥಿ 5:16 ನ್ನು ಓದಿಕೊಳ್ಳಿರಿ. ಈಗ ಇದನ್ನು ಕುರಿತ ನಿಮ್ಮ ಆಲೋಚನೆ ಏನು ಎಂದು ಹೇಳಿರಿ?

1) ಅ.ಕೃ. 6ನೇ ಅಧ್ಯಾಯದಲ್ಲಿ, ಶಿಷ್ಯಮಂಡಲಿ ವಿಧವೆಯರ ವಿಷಯದಲ್ಲಿ ಚರ್ಚೆ ಮಾಡಿದ ನಂತರ ಸೂಕ್ತ ವ್ಯವಸ್ಥೆಯನ್ನು ಏರ್ಪಡಿಸಿದರು. ಎಲ್ಲೆಲ್ಲಿ ಹೇಗೆ ಹೇಗೆ ಆಹಾರ ಹಂಚಬೇಕೆಂದು ಅವರಿಗೆ ಗೊತ್ತಿದ್ದದ್ದು ಹೇಗೆ? (ಅವರ 1 ತಿಮೋಥಿ 5:9 ರಲ್ಲಿ ನಮೂದಿಸಿರುವ, ಆಲಯದಿಂದ ಸಹಾಯಪಡೆಯುತ್ತಿದ್ದ ವಿಧವೆಯರ ಪಟ್ಟಿ ಅವರ ಕೈಯಲ್ಲಿತ್ತು. ಈ ವಿಷಯದಲ್ಲಿ ನನಗಿದ್ದ ಸಂದೇಹ 1 ತಿಮೋಥಿ 5:16 ನ್ನು ಓದಿದಾಗ ಪರಿಹಾರವಾಯಿತು.

ಈ) ಮತ್ತೊಮ್ಮೆ 1 ತಿಮೋಥಿ 5''9–10 ನ್ನು ಓದಿಕೊಳ್ಳಿ. ಯಾರಿಗೆ ಸಹಾಯಮಾಡಬೇಕು ಎಂಬ ತೀರ್ಮಾನದ ಪ್ರಾಮುಖ್ಯತೆಯ ವಿಷಯದಲ್ಲಿ ಈ ವಾಕ್ಯಗಳು ನಮಗೆ ಬೋಧಿಸುವುದೇನು?

1) ಸಹಾಯಕ್ಕೆ "ಅರ್ಹಳಾದ ವಿಧವೆ" ಸಮುದಾಯವನ್ನು ಕುರಿತು ನಮಗೆ ಬೋಧಿಸುವುದೇನು? (ಒಂದು ರೀತಿ ನೋಡಿದರೆ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳುತ್ತಿದ್ದ ಗುಂಪು ಇಂದೆಂದು ನಮಗನ್ನಿಸುತ್ತದೆ).

i) ಇದು ವಿಧವೆಯರ ಕೆಲಸ ಮಾತ್ರ ಆಗಿತ್ತೇ? (ನಾವೆಲ್ಲರೂ ಮಾಡಬೇಕಾದ ಕೆಲಸವಿದು. ಸಮುದಾಯದ ಒಂದು ಭಾಗವಾಗಿರುವ ಕರ್ತವ್ಯ ಸಹ).

ಉ) 1 ತಿಮೋಥಿ 5:11–14 ನ್ನು ಓದಿಕೊಳ್ಳಿರಿ. ಸಹಾಯ ಕೇಳುವವರೆಲ್ಲರಿಗೆ ನಾವು ಸಹಾಯಮಾಡಬಹುದೇ? ಎಲ್ಲರನ್ನೂ ಸಹಾಯಮಾಡಬೇಕಾದವರ "ಪಟ್ಟಿ"ಯಲ್ಲಿ ಸೇರಿಸಬಹದೇ? (ಜನರು ಮೈಗಳ್ಳರಾಗುವುದನ್ನೂ ಮತ್ತು ಆ ಮೂಲಕ ತೊಂದರೆಗಳನ್ನುದ್ಭವಿಸುವುದನ್ನು ನಾವು ಉತ್ತೇಜಿಸಬಾರದೆಂದು ಪೌಲನು ಇಲ್ಲಿ ನಮಗೆ ಬೋಧಿಸುತ್ತಿದ್ದಾನೆ.

1) ನಮ್ಮಲ್ಲಿ ಸಹಾಯ ಬೇಡಿ ಬರುವವರಿಗೆಲ್ಲಾ ಈ ನಿಯಮ ಅನ್ವಯವಾಗುತ್ತದೆಯೇ?

ii) ಲೂಕ 6:30–31 ನ್ನು ಓದಿಕೊಳ್ಳಿರಿ. ಈ ವಚನವನ್ನು ನೀವು ಹೇಗೆ ಅರ್ಥಮಾಡಿಕೊಳ್ಳುತ್ತೀರಿ?

2) ಯಾರ್ಯಾರಿಗೆ ಸಹಾಯಮಾಡಬೇಕು ಎಂಬುದನ್ನು ತೀರ್ಮಾನಿಸುವುದು ಹೇಗೆ?

ಊ) ಕಳೆದ ಮೂರು ವಾರಗಳಿಂದ, ಅಂಗಡಿ ಮಾಳಿಗೆಗಳ ಬಳಿಯಲ್ಲಿ, ಎರಡು ಸಲ, ಕೈಕಾಲು ಚೆನ್ನಾಗಿರುವ ಮಂದಿ ನನ್ನಲ್ಲಿ ಹಣಕ್ಕೆ ಬೇಡುತ್ತಿದ್ದರು. ನನ್ನ ಖರ್ಚಿಗೆ ತೊಂದರೆಯಾಗದಂತೆ ನಾನವರಿಗೆ ಹಣ ಕೊಡಬಹುದಾಗಿತ್ತು. ನಾನು ಏನು ಮಾಡಬಹುದಾಗಿತ್ತು ಎಂಬುದರ ಬಗ್ಗೆ ನಿಮ್ಮ ಆಲೋಚನೆ ಏನು? ಕಳೆದ ವಾರದ ಪಾಠ ಜ್ಞಾಪಿಸಿಕೊಳ್ಳಿ. ಮತ್ತಾಯ 25:34–36 ರಲ್ಲಿ ನೀತಿವಂತರು ಭೌತಿಕ (ಆಹಾರ, ನೀರು, ಬಟ್ಟೆ ಇತ್ಯಾದಿ) ನೆರವು ನೀಡಿದರೇ ವಿನಹ ಹಣ ಕೊಡಲಿಲ್ಲ ಎಂದು ಕಲಿತುಕೊಂಡೆವು. ಈ ವಾರ ಪೌಲನು ಅರ್ಹರಾದವರಿಗೆ ಸಹಾಯಮಾಡಿರಿ, ಸೋಮಾರಿಗಳನ್ನು ಉತ್ತೇಜಿಸಬೇಡಿ ಎಂದು ಹೇಳುತ್ತಿರುವುದನ್ನು ನೋಡಿದೆವು. ಹೀಗಾಗಿ ಇಲ್ಲಿರುವ ಸಾಮಾನ್ಯ ಸಂಗತಿಯೆಂದರೆ, ನೆರವು ಕೇಳಲು ಬಂದವರ ಬಗ್ಗೆ ಸ್ವಲ್ಪ ತಿಳಿದುಕೊಂಡಿರುವದು

ಒಳ್ಳೆಯದು ಎನಿಸುತ್ತದೆ. ಹಣದ ಸಹಾಯ ಮಾಡುವದು ದೊಡ್ಡ ಸಂಗತಿಯೇನಲ್ಲ, ಆದರೆ ಯಾವ ವ್ಯಕ್ತಿಗೆ ಸಹಾಯಮಾಡುತ್ತಿರೋ ಆ ವ್ಯಕ್ತಿಯ ಬಗ್ಗೆ ಸ್ವಲ್ಪ ತಿಳಿದುಕೊಂಡಿರುವುದು ಒಳ್ಳೆಯದು).

1) ಇಂಥಹ ಒಂದು ತಾರ್ಕಿಕ ತೀರ್ಮಾನಕ್ಕೆ ಬಂದ ಮೇಲೆ, ಲೂಕ 6:35–36 ರಲ್ಲಿ ಯೇಸುಸ್ವಾಮಿ ಹೇಳುವ ಮಾತುಗಳನ್ನು ಓದಿಕೊಳ್ಳಿ. ಯೇಸುಸ್ವಾಮಿ ಹೇಳುತ್ತಾರೆ. ಬೇರೆಯವರಿಗೆ ಕರುಣೆ ತೋರಿಸಿ ಎಂದು ಅಷ್ಟು ಮೊತ್ತವಲ್ಲ. ಉಪಕಾರ ನೆನಸದವರಿಗೂ ಕೆಟ್ಟವರಿಗೂ ಕರುಣೆ ತೋರಿಸಿರಿ ಎಂದಿದ್ದಾರೆ! ಇದರ ಅರ್ಥ ಸೋಮಾರಿಗಳಿಗೂ ನಾವು ಕರುಣೆ ತೋರಬೇಕೆ? (ಬಹುಶ: ಸ್ವಲ್ಪ ಮಟ್ಟಿಗೆ ಅವರಿಗೂ ಕರುಣೆ ತೋರೋಣ)

ಖ) ಅವಶ್ಯಕತೆ ಇರುವವರಿಗೆ ಒದಗಿರಿ ಮತ್ತು ಯಾರಿಗೆ ಒದಗಬೇಕೋ ಅವರ ಬಗ್ಗೆ ತಿಳಿದುಕೊಂಡಿರಬೇಕು ಎಂಬುದು ಇಂದಿನ ಸಮುದಾಯದಲ್ಲಿ ಬಹುಮುಖ್ಯವಾದ ಅಂಶ ಎಂದು ತಿಳಿದುಕೊಂಡೆವು. ಹೀಗೆ ನೆರವಾಗುವ ವಿಷಯದಲ್ಲಿ ದೂರದರ್ಶನ ಹಾಗೂ ಯಂತ್ರೋಪಕರಣಗಳ ಪಾತ್ರವೇನು? (ಆರಾಧನೆಯ ಸ್ಥಳದಾಚೆ ನಮ್ಮ ಆಲಯಕ್ಕೆ ಸೇರಿದ ಸಮುದಾಯದ ಸದಸ್ಯರುಗಳನ್ನು ಭೇಟಿಮಾಡದಿದ್ದರೆ ಅವರ ಅವಶ್ಯಕತೆಗಳೇನು ಮತ್ತು ಅವರಿಗೆ ಬೇಕಾದ ನೆರವೇನು ಎಂಬುದು ನಮಗೆ ಗೊತ್ತಾಗಲಿಕ್ಕೆ ಸಾಧ್ಯವೇ ಇಲ್ಲ, ಇಂತಹ ಕಾರ್ಯಗಳಿಗೆ ಯಂತ್ರೋಪಕರಣಗಳು ಅಡ್ಡಿ ಮಾಡುತ್ತಿವೆ ಎಂದೆನಿಸುತ್ತಿದೆ ನನಗೆ).

1) ಇದನ್ನು ಸರಿಪಡಿಸುವುದು ಹೇಗೆ? (ಸಣ್ಣ ಸಣ್ಣ ಗುಂಪಿನ ಸತ್ಯವೇದ ಅಧ್ಯಾಯನ ಕೂಟಗಳನ್ನು ನಡೆಸುವದು ಈ ದಿಕ್ಕಿನಲ್ಲಿ ಸಹಾಯಕಾರಿ).

i) ಇದಕ್ಕೂ ತಾಂತ್ರಿಕ ನೆರವುಂಟೇ? (ಯಾಕಿಲ್ಲ ಪೇಶ್‌ಬುಕ್? ಮತ್ತು ಸ್ಕೈಫ್‌ನ್ನು ಬಳಸಿ ಸತ್ಯವೇದ ಅಧ್ಯಾಯನ ನೀಡಬಹುದು).

ಖ) ಸ್ನೇಹಿತನೇ, ನೀವಿರುವ ಸಮುದಾಯದಲ್ಲಿ ಬೇರೆ ಕ್ರೈಸ್ತರಿಗೂ ಸ್ಥಳಾವಕಾಶವುಂಟೆ? ಹಾಗಿಲ್ಲದಿದ್ದರೆ, ಇಂದೇ ಏಕೆ ವಿಶ್ವಾಸಿಗಳ ಕೂಟವೊಂದನ್ನು ಹುಟ್ಟುಹಾಕಬಾರದು? ಇದು ನಿಮ್ಮ ಜೀವನಕ್ಕೆ ದೇವರ ಚಿತ್ತವೂ ಆಗಿರಬಹುದು.

III. ಮುಂದಿನ ವಾರ: ಸೇವೆ (ಮಿಶನ್).